ಶ್ರೀ ಪಿ. ಲಕ್ಷ್ಮೀಸಾಗರ್.—ಇನ್ನು ೨–೩ ತಿಂಗಳ ಒಳಗೆ ಅವ್ಯಗಳ ಪ್ರಾರಂಭ ಮಾಡತಕ್ಕ ಪ್ರಯತ್ನವನ್ನು ಮಾಡುತ್ತೇನೆಂದು ಶ್ರೀರಂಗದೇವರಾಯಲು ಅವರಿಗೆ ನಾನು ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಶ್ರೀ. ರಂಗದೇವರಾಯಲು.–ಅಧ್ಯಕ್ಷರೇ ನಾನುತಮ್ಮ ಮೂಲಕ ಈ ಬಗ್ಗೆ ಅವರಿಗೆ ಧನ್ಯವಾದ ಗಳನ್ನು ಅರ್ಪಿಸುತ್ತೇನೆ

ಶ್ರೀ ಪಿ. ಲಕ್ಷ್ಮೀಸಾಗರ್.—ಅಲ್ಲಿ ಯಂತ್ರೋಪಕರಣಗಳ, ವಿದ್ಯುದಾಗಾರದ ಕಾರ್ಯ ಆಗಿದೆ. ಅಲ್ಲಿ ನೀರಿನ ಸೌಕರ್ಯಕ್ಕೆ ಕೊಳವೆ ಬಾವಿ ತೋಡಲಾಗಿದ್ದು ಕೊಳವೆ ಬಾವಿಯಲ್ಲಿ ೪೦೦ ಗ್ಯಾಲನ್ ನೀರು ಬರುತ್ತಾ ಇದೆ. ಇದು ಸಾಕಷ್ಟು ಪ್ರಮಾಣದಲ್ಲಿ ಇಲ್ಲದೇ ಇರುವುದರಿಂದ ನಗರಸಭೆಯು ಪತಿಯಿಂದ ನೀರನ್ನು ಪಡೆಯಬೇಕಾಗಿದ್ದು ಈ ಬಗ್ಗೆ ಅವರೂ ಕೂಡಾ ಒಪ್ಪಿರುತ್ತಾರೆ ಇದೆಲ್ಲಾ ಕೆಲಸಗಳು ಆಗಿರುತ್ತವೆ. ಆದ್ದರಿಂದ ಇನ್ನು ೩ ತಿಂಗಳ ಒಳಗೆ ಪ್ರಾರಂಭ ಮಾಡತಕ್ಕ ಪ್ರಯತ್ನ ನಡೆಯುತ್ತದೆನ್ನುವ ಭಾವನೆಯಿಂದ ಅವರಿಗೆ ಭರವಸೆ ಕೊಟ್ಟಿದ್ದೇನೆ.

ಮುಂದೂಡಲಾದ ಪ್ರಶ್ನೆಗಳು

ಲಭ್ಯವಿರುವ ಸ್ಯಾಟಲೈಟಿನ ಸೌಲಭ್ಯಗಳನ್ನು ಸರ್ಕಾರವು ಉಪಯೋಗಿಸಿಕೊಳ್ಳುವುದರ ಬಗ್ಗೆ

೧೬೮೧ ಶ್ರೀ ಆರ್.ಪಂಕಟರಾಮಯ್ಯ(ಮುಳಬಾಗಿಲು).–ಮಾನ್ಯ ಗಣಿ ಮತ್ತು ಭೂವಿಜ್ಞಾನ,ಯುವ ಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಲಭ್ಯವಿರುವ ಸ್ಯಾಟಲೈಟಿನ ಸೌಲಭ್ಯಗಳನ್ನು ಸರ್ಕಾರ ಭೂಮಿಯೊಳಗಿನ ಅಂತರ್ಜಲದ ಅಸ್ತಿತ್ವವನ್ನು ಪತ್ತೆ ಮಾಡಲು ಉಪಯೋಗಿಸಿಕೊಳ್ಳುತ್ತಿದೆಯೆ ?

ಆ) ರಾಜ್ಯದಲ್ಲಿ ಹಲವಾರು ಪ್ರದೇಶಗಳನ್ನು ಕಪ್ಪು ಮತ್ತು ಭೂದು ಎಂದು ಘೋಷಿಸಿರುವುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ ಸರ್ಕಾರವು ಕರ್ನಾಟಕದ ಕೆಲವು ಜಿಲ್ಲೆಗಳಿಗೆ ಕಪ್ಪು ಮತ್ತು ಭೂದು ಎಂದು ಘೋಷಿಸಿರುವ ನಿರ್ಬಂಧಗಳನ್ನು ತೆಗೆದು ಹಾಕುವ ಸಾಧ್ಯತೆ ಇದೆಯೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ, ಯುವಜನಸೇವಾ ಹಾಗೂ ಕ್ರೀಡೆಗಳ ರಾಜ್ಯ ಸಚಿವರು

ಅ) ಹೌದು

ಆ) ನಿಜ

ಇ) ಮೈಕ್ರೋ ಲೆವೆಲ್ ವಾಟರ್ ಸರ್ವೆ ಮಾಡಿದ ನಂತರ ಸಾಧ್ಯತೆಗಳು ಕಂಡು ಬಂದಲ್ಲಿ ನಿರ್ಬಂಧಗಳ ಪಡಿಲಿಕೆಯನ್ನು ಪರಿಗಣಿಸಲಾಗುವುದು.

ಶ್ರೀ ಆರ್. ಪಂಕಟರಾಮಯ್ಯ.—ಅಧ್ಯಕ್ಷರೇ, ರಾಜ್ಯದಲ್ಲಿ ಹಲವಾರು ಪ್ರದೇಶಗಳನ್ನು ಕಪ್ಪು ಮತ್ತು ಬೂದು ಎಂದು ಘೋಷಿಸಿರುವುದು ನಿಜವೆಂದು ಹೇಳಿದ್ದಾರೆ. ಇದು ಯಾವ ಯಾವ ಪ್ರದೇಶಗಳು ? ಮತ್ತೆ ಮೈಕ್ರೋ ಲೆವೆಲ್ ವಾಟರ್ ಸರ್ವೆ ಮಾಡಿದ ನಂತರ ನಿರ್ಬಂಧಗಳ ಪಡಿಲಿಕೆ ಬಗ್ಗೆ ಪರಿಗಣಿಸಲಾಗುವುದು ಎಂದು ಹೇಳಿದ್ದಾರೆ ಆದರೆ ಅನೇಕ ಕಡೆ ಈ ರೀತಿಯ ಸರ್ವೇ ಆಗಿದೆ ಮತ್ತೆ ರೀಸರ್ವೆ ಕೂಡಾ ಎಲ್ಲೆಲ್ಲಿ ಆಗಿದೆ ಎಂಬುದನ್ನು ತಿಳಿಸಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಅಧ್ಯಕ್ಷರೇ, ರಾಜ್ಯದಲ್ಲಿ ಒಟ್ಟು ೭ ಜಿಲ್ಲೆಗಳಲ್ಲಿ ಇಂತಹ ಪ್ರದೇಶಗಳನ್ನು ಘೋಷಿಸಲಾಗಿದೆ ಬೆಂಗಳೂರು ಜಿಲ್ಲೆಯ ದೇವನಹಳ್ಳಿ ಮತ್ತು ಹೊಸಕೋಟೆ ಇವುಗಳನ್ನು ಕಪ್ಪು ಎಂದು ಪರಿಗಣಿಸಲಾಗಿದೆ ಕೋಲಾರದ ಮುಳಬಾಗಿಲು, ಗೌರಿಬಿದನೂರು ಕಪ್ಪು ಭಾಗವೆಂದು,

ಬೆಳಗಾಂನಲ್ಲಿ ರಾಯಭಾಗ್, ಚಿತ್ರದುರ್ಗದಲ್ಲಿ ಮೊಳಕಾಲ್ಮೂರು ಕಪ್ಪು ಭಾಗ ಎಂದು ಪರಿಗಣಿಸಲಾಗಿದೆ. ಎಲ್ಲಾ ಕಡೆ ಮೈಕ್ರೋ ಲೆವೆಲ್ ಸರ್ವೇ ಇನ್ನೂ ಸಂಪೂರ್ಣವಾಗಿ ಆಗಿಲ್ಲ. ಬಹುಶಃ ಕೋಲಾರ ಜಿಲ್ಲೆಯಲ್ಲಿ ಮಾಡಿದ್ದೇವೆ ಇನ್ನೂ ಸಂಪೂರ್ಣವಾದ ವರದಿಯನ್ನು ಸಲ್ಲಿಸಬೇಕಾಗಿದೆ ಆಪರದಿ ಬಂದ ನಂತರ ಕಪ್ಪು ಎಂದು ಏನು ಇದೆ ಅದನ್ನು ಆ ತಾಲ್ಲೂಕಿನಲ್ಲಿ ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ೯ ತಾಲ್ಲೂಕುಗಳಲ್ಲಿ ಸ್ಥಿತಿವಂತರು ಬೋರ್ವೆಲ್‌ಗಳನ್ನು ತೆಗೆಸಿ ತಮಗೆ ಬೇಕಾದ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ ಆದರೆ ಸ್ಥಿತಿಗತಿ ಚೆನ್ನಾಗಿ ಇಲ್ಲದೇ ಇರುವವರು ಸಾಲಕ್ಕೆ ಪಿ.ಎಲ್.ಡಿ. ಬ್ಯಾಂಕ್‌ಗೆ ಅಥವಾ ಇನ್ನಿತರ ಪೆಡ್ಯೂಲ್ಡ್ ಬ್ಯಾಂಕ್‌ಗಳಿಗೆ ಅರ್ಜಿ ಹಾಕಿದಾಗ ಈ ಕಪ್ಪು ಮತ್ತು ಬಿಳುದು ಪ್ರದೇಶ ಎನ್ನುವುದು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಕೋಲಾರದಲ್ಲಿ ೭ ತಾಲ್ಲೂಕುಗಳನ್ನು ಗ್ರೇ ಏರಿಯಾ ಎಂದು ಮಾಡಿ ಸಾಲದ ಅನುಕೂಲತೆಗಳನ್ನು ನಿರಾಕರಿಸಿರುತ್ತಾರೆ. ಯು.ಆರ್. ರಾವ್ ಅವರು ಸ್ಯಾಟಲೈಟ್ ಸರ್ವೇ ಕಾರ್ಯಕ್ರಮ ಕೈಗೊಂಡಿದ್ದಾರೆಂದು ನನ್ನ ಒಂದು ಪ್ರಶ್ನೆಗೆ ಹೋದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಉತ್ತರ ನೀಡಿದ್ದರು. ಈ ಸರ್ವೆಯಲ್ಲಿ ವಿಲೇಜ್‌ನ್ನು ಒಂದು ಯೂನಿಟ್ ಆಗಿ ಇಟ್ಟುಕೊಂಡು ವ್ಯಾಲಿ ಸರ್ವೇ ಮಾಡಿದರೆ ಯಾವ ಸ್ಥಳದಲ್ಲಿ ನೀರಿನ ಅನುಕೂಲತೆ ಹೆಚ್ಚು ಇದೆ ಎಂಬುದನ್ನು ತಿಳಿಯುವುದಕ್ಕೆ ಅನುಕೂಲ ಆಗುತ್ತದೆಂದು ನನ್ನ ಅಭಿಪ್ರಾಯ ಈ ಬಗ್ಗೆ ಅವಕಾಶ ಮಾಡಿಕೊಡುತ್ತೀರಾ ? ಎರಡನೆಯದಾಗಿ ನೀರು ಎಲ್ಲಾ ಕಡೆ ಸಿಗುತ್ತಿದೆ ಇದರಿಂದ ಕೊಳವೆಬಾವಿಗಳನ್ನು ರೈತರು ಹಾಕಿ ಕೊಂಡಿದ್ದಾರೆ ಆದ್ದರಿಂದ ತಕ್ಷಣ ಕೆಲವು ವರ್ಷಗಳಲ್ಲಿ ಡಾರ್ಕ್ ಆಗುತ್ತಾ ಗ್ರೇ ಏರಿಯಾ ಎಂದು ಘೋಷಿಸಿರುವುದನ್ನು ತಪ್ಪಿಸಿಟ್ಟುವುದಕ್ಕೆ ದಯವಿಟ್ಟು ಸ್ಟೇ ಆರ್ಡರ್ ಕೊಟ್ಟು ಎಲ್ಲಾ ಕಡೆ ನೀರು ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿ ಕೊಡಿ.

ಶ್ರೀ ಆರ್. ಸಿ. ಜಿಗಜಿಣಗಿ.—ಮಾನ್ಯ ಸದಸ್ಯರು ಹೇಳಿದ ತಕ್ಷಣ ಆ ಆರ್ಡರನ್ನು ಸಸ್ಪೆಂಡ್ ಮಾಡುವುದಕ್ಕಾಗುವುದಿಲ್ಲ. ಕಾನೂನಿನ ಚೌಕಟ್ಟಿನೊಳಗಡೆ ಬರುವುದಾದರೆ ಪರಿಶೀಲನೆ ಮಾಡಿ ನೋಡುತ್ತೇನೆ. ಉದಾಹರಣೆಗೆ ಹೇಳುವುದಾದರೆ, ನನ್ನ ತಾಲ್ಲೂಕನ್ನು ಡಾರ್ಕ್ ಏರಿಯಾ ಎಂದು ಗುರುತು ಮಾಡಿದ್ದಾರೆ ಇದೊಂದು ಅಬಾರ್ಡ್‌ನವರು ಮಾಡತಕ್ಕ ವ್ಯವಸ್ಥೆ ಈ ಬಗ್ಗೆ ಸರ್ಕಾರ ಒಂದು ಯೋಚನೆಯನ್ನು ಮಾಡಿದೆ, ಅದು ಕ್ಯಾಬಿನೆಟ್ ಸಬ್ ಕಮಿಟಿಯ ಮುಂದಿದೆ ಕಾನೂನಿನ ಚೌಕಟ್ಟಿನೊಳಗಡೆ ಈಗಿರತಕ್ಕ ನಿರ್ಬಂಧಗಳನ್ನು ತೆಗೆಯಲಿಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಕಳೆದ ಮೂರು ಪರ್ಷಗಳಿಂದ ಇದೇ ಉತ್ತರ ಬರುತ್ತಾ ಬರುತ್ತಿದೆ ಬಡವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದರೆ ಅಷ್ಟೆ ಸಾಕು.

ಶ್ರೀ ಆರ್.ಸಿ. ಜಿಗಜಿಣಗಿ.—ರೈತರ ಬಗ್ಗೆ ಮಾನ್ಯ ಸದಸ್ಯರಿಗೆ ಎಷ್ಟು ಕಳಕಳಿ ಇದೆಯೋ ಅದಕ್ಕಿಂಥ ಹೆಚ್ಚಿನ ಕಳಕಳಿ ನನಗೆ ಇದೆ. ಆದ್ದರಿಂದ ಇವನ್ನು ಸಾಧ್ಯವಾದಷ್ಟು ನಿವಾರಣೆ ಮಾಡುತ್ತೇವೆ. ಆದರೆ ಯಾವ ದಿಪಸ, ಯಾವ ತಿಂಗಳು ಎಂದು ಹೇಳುವುದಕ್ಕಾಗುವುದಿಲ್ಲ ಅದನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ತಡೆಹಿಯಲಾದ ಪ್ರಶ್ನೆ ಸಂಖ್ಯೆ ೪೦೭ (೧೪೧೮)

ಅಧ್ಯಕ್ಷರು —ಮಾನ್ಯ ಕೆ. ಪ್ರತಾಪಚಂದ್ರಶೆಟ್ಟಿಯವರ ಪರವಾಗಿ ಮಾನ್ಯ ಶ್ರೀ ಇದಿನಬ್ಬರವರು ಪ್ರಶ್ನೆಯನ್ನು ಕೇಳಬಹುದು.

ಕೆ.ಎಫ್.ಡಿ.ಸಿ, ಕೆ.ಪಿ.ಸಿ. ಹಾಗೂ ಕೆ.ಸಿ.ಡಿ.ಸಿಯಲ್ಲಿ ತೊಡಗಿಸಿರುವ ಬಂಡವಾಳ

೧೪೧೮. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಅರಣ್ಯ ಇಲಾಖೆಯಡಿಯಲ್ಲಿರುವ ಕರ್ನಾಟಕ ಅರಣ್ಯೋದ್ಯಮಿ ನಿಗಮ ಕರ್ನಾಟಕ ಪ್ಲಾಂಟೇಷನ್ ನಿಗಮ, ಕರ್ನಾಟಕ ಗೇರು ಅಭಿವೃದ್ಧಿ ನಿಗಮಗಳಲ್ಲಿ ಸರ್ಕಾರವು ಹೊಂದಿರುವ ಬಂಡವಾಳದ ಪ್ರಮಾಣವೆಷ್ಟು ಹಾಗೂ ಯಾವ ರೂಪದಲ್ಲಿ ಈ ಬಂಡವಾಳವನ್ನು ಹೂಡಲಾಗಿದೆ ?